**ಡಿಡಬ್ಲೂ.1: ಎಸ್.ಕೆ. ನಿಂಗರಾಜು**

**ದಿನಾಂಕಃ 17.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದಃ**

ನಾನು ಎರಡನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ನಿವೃತ್ತನಾದ ನಂತರ ಕಡಲೆಬೀಜ,ಉಪ್ಪಿನಕಾಯಿ ವ್ಯಾಪಾರ ಮಾಡುತ್ತೇನೆ. ನಾನು ಈ ಮೊದಲು ತೋಟಗಾರಿಕೆ ಇಲಾಖೆಯಲ್ಲಿ Peon ಆಗಿ ಕೆಲಸ ಮಾಡುತ್ತಿದ್ದೆ. ನಾನು 1984 ನೇ ಇಸವಿಯಿಂದ 2023 ನೇ ಇಸವಿಯವರೆಗೂ ಕರ್ತವ್ಯ ನಿರ್ವಹಿಸುತ್ತಿದ್ದೆನು. ಲಾಲ್‌ಬಾಗ್‌ನಲ್ಲಿರುವ ಹಾಪ್‌ಕಾಮ್ಸ್ ನಲ್ಲಿ ನಾನು ಕೆಲಸ ಮಾಡುತ್ತಿದ್ದೆನು. ನನ್ನ ಮನೆಯ ವಿಳಾಸ ಮನೆ ನಂ.125, 1 ನೇ ಕ್ರಾಸ್ ಸಿ ಮೇನ್, ಮಂಜುನಾಥ ನಗರ, ಇಟ್ಟಮಡು, ಬೆಂಗಳೂರು-85 ಆಗಿರುತ್ತದೆ. ನನ್ನ ಇಲಾಖೆಯ ವಿಳಾಸಕ್ಕೆ ನನಗೆ ಯಾವುದೇ ಪತ್ರಗಳು ಬರುತ್ತಿರಲಿಲ್ಲ. ನಾನು ನಿವೃತ್ತಿಗೊಳ್ಳುವ ಎರಡು-ಮೂರು ವರ್ಷಗಳ ಮೊದಲು ನಮ್ಮ ಇಲಾಖೆಯಲ್ಲಿ ಹಾಜರಾತಿಗಾಗಿ ಬಯೋಮೆಟ್ರಿಕ್ ಹಾಕಿಸಿದ್ದರು. ನನ್ನ ಕೆಲಸದ ಅವಧಿಯನ್ನು ನಾನು ಹೇಳಲಾಗುವುದಿಲ್ಲ. ನಾನು ಹಗಲು ಮತ್ತು ರಾತ್ರಿ ಪಾಳಿಯಲ್ಲಿ ಕೆಲಸ ಮಾಡುತ್ತಿದ್ದೆನು. ನಿಮ್ಮ ವಿಳಾಸದ ಬಾಬ್ತು ಆಧಾರ್ ಕಾರ್ಡನ್ನು ಹಾಜರುಪಡಿಸಲು ಸಾಧ್ಯವೇ ಎಂದರೆ ಹಾಜರುಪಡಿಸುತ್ತೇನೆ. ನಮ್ಮ ಮನೆಯ ಗ್ಯಾಸ್ ಕಲೆಕ್ಷನ್ ನನ್ನ ಮಗನ ಹೆಸರಿನಲ್ಲಿದೆ.

**2.** ನಿ.ಪಿ.1 ನನ್ನ ಖಾತೆಗೆ ಸೇರಿದ ಚೆಕ್ಕು ಆಗಿರುತ್ತದೆ. ನಿ.ಪಿ.1 ರಲ್ಲಿನ ಸಹಿ ನನ್ನದಾಗಿರುವುದಿಲ್ಲ, ಸುಜಾತ ಮತ್ತು ಕಾವ್ಯ ಸೇರಿ ಸಹಿ ಮಾಡಿರುತ್ತಾರೆ. ನಿ.ಪಿ.9 ರಲ್ಲಿನ ಸಹಿ ನನ್ನದಾಗಿರುವುದಿಲ್ಲ. ರಾಮಕೃಷ್ಣ ಎಂಬುವವರು ನನಗೆ ಗೊತ್ತಿಲ್ಲ. ಚೆಕ್ಕಿನಲ್ಲಿರುವ ಸಹಿ ನಿಮ್ಮದಾಗಿರುತ್ತದೆ ಎಂದರೆ ಸರಿಯಲ್ಲ. ವಿವಾದಿತ ಚೆಕ್ಕು ಪಿರ್ಯಾದುದಾರರಿಗೆ ಹೇಗೆ ತಲುಪಿತು ಎಂದರೆ ಸಾಕ್ಷಿಯು ನಾನು ನನ್ನ ದ್ವಿಚಕ್ರ ವಾಹನದಲ್ಲಿ ವಿವಾದಿತ ಚೆಕ್ಕನ್ನು ಇಟ್ಟುಕೊಂಡಿದ್ದೆನು, ಪಿರ್ಯದುದಾರರು ನನ್ನ ದ್ವಿಚಕ್ರ ವಾಹನದಲ್ಲಿದ್ದ ಚೆಕ್ಕನ್ನು ತೆಗೆದುಕೊಂಡಿರುತ್ತಾರೆ ಎಂದು

ನುಡಿಯುತ್ತಾರೆ. ಯಾವಾಗ ನೀವು ವಿವಾದಿತ ಚೆಕ್ಕನ್ನು ನಿಮ್ಮ ವಾಹನದಲ್ಲಿ ಇಟ್ಟುಕೊಂಡಿದ್ದೀರಿ ಎಂದರೆ ನಿರ್ದಿಷ್ಟ ದಿನಾಂಕ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ದ್ವಿಚಕ್ರ ವಾಹನದಲ್ಲಿ ಪಾನ್ ಕಾರ್ಡ್, ಆಧಾರ್ ಕಾರ್ಡು ಮತ್ತು ಚೆಕ್ಕು ಪುಸ್ತಕವನ್ನು ಇಟ್ಟುಕೊಂಡಿದ್ದೆನು. ಪಾನ್ ಕಾರ್ಡ್ ಮತ್ತು ವಿವಾದಿತ ಚೆಕ್ಕನ್ನು ಮಾತ್ರ ಪಿರ್ಯಾದುದಾರರು ತೆಗೆದುಕೊಂಡಿದ್ದರು. ಚೆಕ್ಕು ಕಳೆದು ಹೋಗಿರುವ ಬಗ್ಗೆ ನಾನು ಬ್ಯಾಂಕಿಗೆ ಅರ್ಜಿ ಸಲ್ಲಿಸಿದ್ದೆನು. ಯಾವಾಗ ಅರ್ಜಿ ಸಲ್ಲಿಸಿದೆನು ಎಂದು ನನಗೆ ಗೊತ್ತಿಲ್ಲ. ಚೆಕ್ಕು ಕಳೆದುಕೊಂಡಿರುವ ಬಗ್ಗೆ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದೀರಾ ಎಂದರೆ ಸಾಕ್ಷಿಯು ಯಾರು ಚೆಕ್ಕನ್ನು ಕದ್ದಿರುತ್ತಾರೆ ಎಂದು ತಿಳಿಯದ ಕಾರಣ ನಾನು ದೂರು ದಾಖಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಡಿ.2 ರಲ್ಲಿರುವ ಸಹಿ ನಿಮ್ಮದಾಗಿದೆಯೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ವಕಾಲತ್ತನ್ನು ತೋರಿಸಲಾಗಿ ಅದರಲ್ಲಿರುವ ಸಹಿ ತನ್ನ ಸಹಿ ಎಂದು ನುಡಿಯುತ್ತಾರೆ.

**3.** ಸಾಕ್ಷಿಯು ನ್ಯಾಯಾಲಯದಿಂದ RPAD ಮುಖಾಂತರ ನೀಡಿದ ಸಮನ್ಸ್ ನ ಸ್ವೀಕೃತಿಯನ್ನು ನೋಡಿ ಅದರಲ್ಲಿನ ಸಹಿ ನನ್ನದಾಗಿರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ. ಯಾವ ದಿನಾಂಕದಂದು ಪಿರ್ಯಾದುದಾರರ ವಿರುದ್ದ ನೀವು ದೂರು ದಾಖಲಿಸಿದ್ದೀರಿ ಎಂದರೆ ನನಗೆ ನಿರ್ದಿಷ್ಟ ದಿನಾಂಕ ನನಗೆ ಹೇಳಲಾಗುವುದಿಲ್ಲ. ಪಿರ್ಯಾದುದಾರರ ವಿರುದ್ದ ದೂರನ್ನು ದಾಖಲಿಸಲು ನಮ್ಮ ವಕೀಲರಿಗೆ ಹೇಳಿ ನಾನೆ ಬರೆಯಿಸಿರುತ್ತೇನೆ. ಅದರಲ್ಲಿರುವ ಅಂಶಗಳು ನನಗೆ ತಿಳಿದಿರುವುದಿಲ್ಲ. ನಿ.ಡಿ.2 ರಂತೆ ದೂರು ದಾಖಲಿಸುವ ವೇಳೆಯಲ್ಲಿ ನೀವು ಹಾಪ್‌ಕಾಮ್ಸ್ ನಲ್ಲಿ ಕೆಲಸ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ನಿ.ಡಿ.2 ರಲ್ಲಿ ನಾನು ಬ್ಯಾಂಕಿನಲ್ಲಿ ಸಾಲ ಪಡೆದುಕೊಳ್ಳುವ ಉದ್ದೇಶಕ್ಕಾಗಿ ನನ್ನ ದ್ವಿಚಕ್ರ ವಾಹನದಲ್ಲಿ ಚೆಕ್ಕು ಪುಸ್ತಕವನ್ನು ಇಟ್ಟುಕೊಂಡಿದ್ದೆನು ಎಂದು ನಮೂದಿಸಿದ್ದೀರಾ ಎಂದರೆ ಆ ರೀತಿ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ನನಗೆ ಆಂಗ್ಲ ಭಾಷೆ ಅಥವಾ ಕನ್ನಡ ಭಾಷೆಯನ್ನು ಓದಲು ಬರೆಯಲು ಬರುವುದಿಲ್ಲ. ಫೋನ್ ಪೇ ಕಳೆದ ಎರಡು ತಿಂಗಳಿನಿಂದ ಉಪಯೋಗಿಸತ್ತಿದ್ದೇನೆ. ನಿಮ್ಮ ತಿಂಗಳ ವೇತನದ ಬಗ್ಗೆ ನಿಮ್ಮ ಮೊಬೈಲ್‌ಗೆ ಮೆಸೇಜ್ ಬರುತ್ತಿತ್ತು ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ವಿವಾದಿತ ಚೆಕ್ಕು ನಗದೀಕರಣವಾಗದೆ ಹಿಂದಿರುಗಿದಾಗ ನಿಮ್ಮ ಖಾತೆಯಿಂದ ಅದರ ವೆಚ್ಚದ ಹಣ ಕಡಿತಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದಿಂದ ಸಮನ್ಸ್ ತಲುಪಿದ ಎರಡು ದಿನಗಳ ನಂತರ ಪಿರ್ಯಾದುದಾರರ ವಿರುದ್ದ ದೂರು ದಾಖಲಿಸಿದೆನು. ದೂರನ್ನು ಯಾವ ವಕೀಲರು ಬರೆದರು ಎಂದರೆ ವಕೀಲರ ಹೆಸರು ನನಗೆ ಗೊತ್ತಿಲ್ಲ. ಸಾಕ್ಷಿಗೆ ತನ್ನ ಮುಖ್ಯ ವಿಚಾರಣೆಯಲ್ಲಿನ ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ಸಹಿ ತನ್ನದು ಎಂದು ಒಪ್ಪಿರುತ್ತಾರೆ.

**4.** ನಿ.ಡಿ.2 ರಲ್ಲಿ ನಮೂದಿಸಿರುವ ನಿಮ್ಮ ವಿಳಾಸ ನಂ.125/ಎ, 1 ನೇ ಸಿ ಮೇನ್ ರೋಡ್ ಸಿ ಕ್ರಾಸ್, ಹೊಸಕೆರೆಹಳ್ಳಿ ಇದು ನಿಮ್ಮ ವಿಳಾಸವಾಗಿದೆಯೇ ಎಂದರೆ ನನ್ನ ವಿಳಾಸವಲ್ಲ ಎಂದು ನುಡಿಯುತ್ತಾರೆ. ನಿ.ಡಿ.2 ರಲ್ಲಿ ನಮೂದಿಸಿರುವ ವಿಳಾಸ ನಿಮ್ಮದಾಗಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಕಚೇರಿ ವಿಳಾಸ ಮತ್ತು ಮನೆಯ ವಿಳಾಸಕ್ಕೆ ಪಿರ್ಯಾದುದಾರರು ನೋಟೀಸು ನೀಡಿರುತ್ತಾರೆ ಎಂದರೆ ಯಾವುದೇ ನೋಟೀಸು ನನಗೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮನೆಯ ವಿಳಾಸಕ್ಕೆ ನೋಟೀಸು ಕಳುಹಿಸಿರುತ್ತಾರೆ ಎಂದರೆ ಆ ವೇಳೆಯಲ್ಲಿ ನಾನು ಮನೆಯಲ್ಲಿರಲಿಲ್ಲ ಮೇಲುಕೋಟೆಗೆ ಹೋಗಿದ್ದೆನು ಎಂದು ನುಡಿಯುತ್ತಾರೆ. ಕಚೇರಿ ಹಾಗೂ ಮನೆಯ ವಿಳಾಸಕ್ಕೆ ನೋಟೀಸು ನೀಡಿದ್ದರೂ ಸಹ ನೀವು ಉದ್ದೇಶಪೂರ್ವಕವಾಗಿ ನೀವು ಸ್ವೀಕರಿಸಲಿಲ್ಲಎಂದರೆ ಸರಿಯಲ್ಲ. ಪಿರ್ಯಾದುದಾರರಿಂದ ನೀವು 6 ಲಕ್ಷ ರೂ. ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ. ಹಣದ

ಮರುಪಾವತಿಗಾಗಿ ವಿವಾದಿತ ಚೆಕ್ಕು ಹಾಗೂ ಆನ್ ಡಿಮಾಂಡ್ ಪ್ರೋನೋಟನ್ನು ಸಾಕ್ಷಿದಾರರ ಸಮಕ್ಷಮ ನೀಡಿರುತ್ತೀರಿ ಎಂದರೆ ಸರಿಯಲ್ಲ. ಚೆಕ್ಕು ಹಾಗೂ ಆನ್ ಡಿಮಾಂಡ್ ಪ್ರೋನೋಟನ್ನು ನೀವೇ ಬರೆದುಕೊಟ್ಟಿದ್ದರೂ ಸಹ ನಾನೇ ಬರೆದುಕೊಟ್ಟಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಕಾವ್ಯ ಮತ್ತು ಸುಜಾತರವರು ನನ್ನ ಚೆಕ್ಕನ್ನು ಕದ್ದು ಅವರೇ ಬರವಣಿಗೆ ಮಾಡಿರುತ್ತಾರೆ, ಪ್ರೋನೋಟಿನಲ್ಲಿಯೂ ಸಹ ಅವರೇ ಬರೆದುಕೊಂಡು ಸಹಿ ಮಾಡಿಕೊಂಡಿರುತ್ತಾರೆ. ಆ ವಿಷಯವನ್ನು ನಿಮ್ಮ ದೂರಿನಲ್ಲಿ ನಮೂದಿಸಿದ್ದೀರಾ ಎಂದರೆ ಆ ವೇಳೆಯಲ್ಲಿ ಕಾವ್ಯ ಮತ್ತು ಸುಜಾತರವರು ಅವರೇ ಚೆಕ್ಕು ಹಾಗೂ ಪ್ರೋನೋಟನ್ನು ಭರ್ತಿ ಮಾಡಿ ಅದಕ್ಕೆ ಸಹಿ ಮಾಡಿರುವ ಬಗ್ಗೆ ನನಗೆ ತಿಳಿದಿರಲಿಲ್ಲ.

**5.** ನಿಮಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಯಾದ ಎರಡು ತಿಂಗಳ ನಂತರ ಠಾಣೆಯಲ್ಲಿ ಪಿರ್ಯಾದುದಾರರ ವಿರುದ್ದ ಸುಳ್ಳು ದೂರು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ತೊಂದರೆ ನೀಡುವ ಉದ್ದೇಶದಿಂದ ಪಿರ್ಯಾದುದಾರರ ವಿರುದ್ದ ದೂರು ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ನಾನು ಕಡಲೆಬೀಜ ವ್ಯಾಪಾರವನ್ನು ನಿವೃತ್ತಿಯಾಗುವ ಮೊದಲಿನಿಂದಲೂ ಮಾಡುತ್ತಿದ್ದೆನು. ನೀವು ಸರ್ಕಾರಿ ನೌಕರರಾಗಿದ್ದ ಕಾರಣ ನೀವು ಕಡಲೇಬೀಜ ಮಾರಲು ಅವಕಾಶವಿರಲಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ನೀವು ಹಣ ನೀಡಲು ಬಾದ್ಯಸ್ತರಾಗಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಿವಾದಿತ ಚೆಕ್ಕು ಹಾಗೂ ಪ್ರೊನೋಟಿನಲ್ಲಿರುವ ಸಹಿ ನಿಮ್ಮದಾಗಿರುತ್ತದೆ ಎಂದರೆ ಸರಿಯಲ್ಲ. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ನಾನು ವಿವಾದಿತ ಚೆಕ್ಕು ಮತ್ತು ಪ್ರೊನೋಟನ್ನು ದ್ವಿಚಕ್ರ ವಾಹನದಲ್ಲಿ ಇಟ್ಟುಕೊಂಡಿದ್ದೆನು ಎಂದು ಸಾಕ್ಷ್ಯ ನುಡಿದಿದ್ದೀರಾ ಎಂದರೆ ಸಾಕ್ಷಿಯು ನಾನು ಚೆಕ್ಕನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ನನ್ನ ದ್ವಿಚಕ್ರ ವಾಹನದಲ್ಲಿ ಇಟ್ಟುಕೊಂಡಿದ್ದ ಬಗ್ಗೆ ಸಾಕ್ಷ್ಯ ನುಡಿದಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಕಾವ್ಯ ಮತ್ತು

**ಡಿಡಬ್ಲೂ.1: ಎಸ್.ಕೆ. ನಿಂಗರಾಜು**

ಸುಜಾತರವರು ಚೆಕ್ಕು ಮತ್ತು ಪ್ರೋನೋಟನ್ನು ಕದ್ದಿದ್ದಾರೆ ಎಂದು ಸಾಕ್ಷ್ಯ ನುಡಿದಿರುವುದಿಲ್ಲ. ಬ್ಯಾಂಕಿನಲ್ಲಿರುವ ನಿಮ್ಮ ಸಹಿ ಹಾಗೂ ಚೆಕ್ಕಿನಲ್ಲಿರುವ ಸಹಿ ಒಂದೇಯಾಗಿರುತ್ತದೆ ಎಂದರೆ ಸರಿಯಲ್ಲ. ಬ್ಯಾಂಕಿನಲ್ಲಿ ಸಾಕಷ್ಟು ಹಣವಿಲ್ಲ ಎಂದು ಹಿಂಬರಹ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚೆಕ್ಕು ಹಾಗೂ ಪ್ರೊನೋಟೀನಲ್ಲಿರುವ ಸಹಿ ನನ್ನದಲ್ಲ ಎಂದು ತೋರಿಸಲು FSL ಗೆ ಕಳುಹಿಸಲು ತೊಂದರೆ ಇಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.